Cover Page

INTERNATIONAL JOURNAL OF MULTIDISCIPLINARY EDUCATIONAL RESEARCH
ISSN:2277-7881(Print); IMPACT FACTOR :10.16(2026); IC VALUE:5.16; ISI VALUE:2.286
PEER REVIEWED AND REFEREED INTERNATIONAL JOURNAL
(Fulfilled Suggests Parameters of UGC by IJMER)
Volume:15, Issue:2(6), February 2026
Scopus Review ID: A2B96D3ACF3FEA2A
Article Received: Reviewed: Accepted
Publisher: Sucharitha Publication, India
Online Copy of Article Publication Available: www.ijmer.in

# ಏಕಲವ್ಯನ ಮೂರು ಚಿತ್ರಗಳು

**ಸಿದ್ಧಪಡಿಸಿದವರು**

1) **ಆದಿನಾರಾಯಣ, ಸಂಶೋಧಾರ್ಥಿ, ಡಾ. ಡಿ ವಿ ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾಲಯ, ತುಮಕೂರು.**

2) **ಪ್ರೊ. ಅಣ್ಣಮ್ಮ, ಸಂಶೋಧನಾ ಮಾರ್ಗದರ್ಶಕರು, ಡಾ. ಡಿ ವಿ ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾಲಯ, ತುಮಕೂರು.**

ದ್ರೋಣನ ಕೀರ್ತಿಯನ್ನು ಕೇಳಿ ಅವನಿಗೆ ಶಿಷ್ಯರಾಗಲು ಬಂದವರಲ್ಲಿ ಏಕಲವ್ಯನು ಒಬ್ಬ. ಅವನು ನಿಷಾದರಾಜನಾದ ಹಿರಣ್ಯಧನುಷನ ಮಗ. ಇವನು ವ್ಯಾಧನ ಮಗನಾದ ಕಾರಣದಿಂದ ದ್ರೋಣರು ಇವನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಲಿಲ್ಲ. ಆದರೆ ಏಕಲವ್ಯ ಅಷ್ಟು ಮಾತ್ರಕ್ಕೆ ನಿರಾಶನಾಗದೆ, ಕಾಡಿಗೆ ಹಿಂತಿರಿಗಿ ಮಣ್ಣಿನಿಂದ ದ್ರೋಣನ ಪ್ರತಿಮೆಯನ್ನು ನಿರ್ಮಿಸಿಕೊಂಡು ಆ ಪ್ರತಿಮೆಯಲ್ಲಿ ದ್ರೋಣರ ಪ್ರತಿಬಿಂಬವನ್ನು ಕಂಡು ಅದಕ್ಕೆ ಗುರು ಸೇವೆ ಸಲ್ಲಿಸುತ್ತ ಶಸ್ತ್ರಾಭ್ಯಾಸಕ್ಕೆ ತೊಡಗಿದನು. ಅವನ ಗುರು ಭಕ್ತಿ ಮತ್ತು ಶ್ರದ್ಧೆಗಳಿಂದ ಕೆಲವೇ ದಿನಗಳಲ್ಲಿ ಬಾಣಪ್ರಯೋಗದಲ್ಲಿ ಪಾರಂಗತನಾದ.

ಒಮ್ಮೆ ಕೌರವರು ಪಾಂಡವರು ಬೇಟೆಗಾಗಿ ಕಾಡಿಗೆ ಹೋದಾಗ ಅವರ ಬೇಟೆ ನಾಯಿಯು ಬೊಗುಳುವುದನ್ನು ಕೇಳಿದ ಏಕಲವ್ಯ ಶಬ್ದವೇಧಿ ವಿದ್ಯೆಯ ಸಹಾಯದಿಂದ ನಾಯಿಯ ಬಾಯೊಳಗೆ ಬಾಣಗಳನ್ನು ಹೂಡಿದನು. ಇದನ್ನು ಅರ್ಜುನ ಕಂಡು ಈ ರೀತಿ ಬಾಣ ಪ್ರಯೋಗ ಮಾಡಿದವರು ಯಾರು? ಅವನ ಗುರುಗಳು ಯಾರು? ಎಂದು ವಿಚಾರಿಸಲು ದ್ರೋಣಾಚಾರ್ಯರೇ ಅವನ ಗುರುಗಳು ಎಂದು ತಿಳಿಯುತ್ತದೆ. ಆಗ ಅರ್ಜುನ ದ್ರೋಣರ ಬಳಿಗೆ ಹೋಗಿ ಹಿಂದೆ ದ್ರೋಣರು ನೀಡಿದ ವಚನ ನೆನಪಿಸುತ್ತಾನೆ. ಧನುರ್ವಿದ್ಯೆಯಲ್ಲಿ ನನ್ನನ್ನು ಬೇರೆ ಯಾವ ಶಿಷ್ಯನು ಮೀರಿಸಲಾರನು ಎಂದು ವಚನಕೊಟ್ಟಿದ್ದೀರಿ ಆದರೆ ಕಾಡಿನಲ್ಲಿ ನಿಮ್ಮ ಶಿಷ್ಯ ಒಬ್ಬ ನನ್ನನ್ನು ಮೀರಿಸುವವನಾಗಿದ್ದಾನೆ. ಅವನು ವ್ಯಾಧನೆಂದು ತಿಳಿಸುತ್ತಾನೆ. ಈ ಮಾತು ಕೇಳಿದ ದ್ರೋಣಾಚಾರ್ಯರು ಅರ್ಜುನನೊಡಗೂಡಿ ಕಾಡಿಗೆ ಬಂದು ಏಕಲವ್ಯನನ್ನು ಕಂಡು ಅವನ ಬಲಗೈ ಹೆಬ್ಬೆರಳನ್ನು ಗುರುದಕ್ಷಿಣೆಯಾಗಿ ಪಡೆಯುತ್ತಾನೆ. ಇದರಿಂದ ಅರ್ಜುನನಿಗೆ ಸಂತೋಷವಾಯಿತು, ದ್ರೋಣನು ಕೊಟ್ಟ ಮಾತು ಉಳಿಯಿತು. ಇದು ವ್ಯಾಸ ಮಹಾಭಾರತದಲ್ಲಿ ಬರುವ ಏಕಲವ್ಯನ ಕಥೆಯ ಸಂಗ್ರಹ.

Cover Page

INTERNATIONAL JOURNAL OF MULTIDISCIPLINARY EDUCATIONAL RESEARCH
ISSN:2277-7881(Print); IMPACT FACTOR :10.16(2026); IC VALUE:5.16; ISI VALUE:2.286
PEER REVIEWED AND REFEREED INTERNATIONAL JOURNAL
(Fulfilled Suggests Parameters of UGC by IJMER)
Volume:15, Issue:2(6), February 2026
Scopus Review ID: A2B96D3ACF3FEA2A
Article Received: Reviewed: Accepted
Publisher: Sucharitha Publication, India
Online Copy of Article Publication Available: www.ijmer.in

ಏಕಲವ್ಯನ ಕಥೆಯನ್ನು ಪ್ರಾಥಮಿಕ ಶಾಲಾ ಪಠ್ಯಗಳಿಂದ ಹಿಡಿದು ಸ್ನಾತಕೋತ್ತರ ಪದವಿಯ ಪಠ್ಯಗಳವರಗೆ ಹಲವು ಸ್ತರಗಳಲ್ಲಿ ವಿದ್ಯಾರ್ಥಿಗಳಿಗೆ ಸ್ಪೂರ್ತಿದಾಯಕ ಪಠ್ಯಗಳಾಗಿ ನಿಡಲಾಗಿದೆ. ಇಲ್ಲಿ ಏಕಲವ್ಯನ ಗುರು ಭಕ್ತಿ, ಅವನ ಶ್ರದ್ಧೆ, ಏಕಾಗ್ರತೆ ಕಲಿಕೆಯಲ್ಲಿನ ಉತ್ಸಾಹ ಮುಂತಾದವುಗಳು ಪ್ರಧಾನವಾಗಿ ಚಿತ್ರಿತವಾಗಿವೆ. ಈ ಕಥೆಯನ್ನು ಮುಖ್ಯ ವಸ್ತುವಾಗಿಸಿಕೊಂಡು ಕಥೆ, ಕವನ, ನಾಟಕಗಳನ್ನು ರಚನೆ ಮಾಡಲಾಗಿದೆ. ಅವುಗಳಲ್ಲಿ ಗೋವಿಂದಪೈ ಅವರ 'ಹೆಬ್ಬೆರಳು', ಕುವೆಂಪು ಅವರ 'ಬೆರಳ್ ಗೆ ಕೊರಳ್', ಮತ್ತು ಸಿದ್ಧಲಿಂಗಯ್ಯ ಅವರ 'ಏಕಲವ್ಯ', ನಾಟಕಗಳು ಪ್ರಮುಖವಾದವುಗಳು. ಈ ಮೂರು ಜನ ನಾಟಕಕಾರರು ಆಯ್ಕೆ ಮಾಡಿಕೊಂಡಿರುವ ಕಥಾ ವಸ್ತು ಒಂದೇ ಆದರೂ, ನಿರೂಪಣಾ ಶೈಲಿ, ರಚನೆಯ ಉದ್ದೇಶ, ಗುರಿ ಮತ್ತು ಪರಿಣಾಮಗಳು ನಾಟಕಕಾರರ ಮನೋಧರ್ಮ ಸಾಹಿತ್ಯದ ಕಾಲಘಟ್ಟಕ್ಕೆ ಅನುಗುಣವಾಗಿ ಭಿನ್ನವಾಗಿವೆ. ಅವುಗಳಲ್ಲಿ ಕಂಡು ಬರುವ ಭಿನ್ನತೆಗಳನ್ನು ಕೆಲವು ಘಟನೆಗಳನ್ನು ಆಧಾರವಾಗಿಟ್ಟುಕೊಂಡು ವಿಶ್ಲೇಷಿಸಲಾಗಿದೆ.

ಅ) ಏಕಲವ್ಯ ದ್ರೋಣರ ಬಳಿ ವಿದ್ಯೆ ಕಲಿಯಬೇಕೆಂಬುದಕ್ಕೆ ಪ್ರೇರಣೆ.

ಆ) ದ್ರೋಣಾಚಾರ್ಯರು ಏಕಲವ್ಯನನ್ನು ಶಿಷ್ಯನಾಗಿ ಸ್ವೀಕರಿಸದಿರಲು ಕಾರಣಗಳು.

ಇ) ಗುರುದಕ್ಷಿಣೆ ಪಡೆಯುವ ವಿಧಾನ.

ಈ) ಗುರುದಕ್ಷಿಣೆ ಪಡೆದ ನಂತರದ ಪರಿಣಾಮ. ಈ ಮೇಲಿನ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಮೂರು ನಾಟಕಗಳಲ್ಲಿನ ನಿರೂಪಣಾ ಶೈಲಿ, ರಚನೆಯ ಉದ್ದೇಶ, ಗುರಿ ಮತ್ತು ಪರಿಣಾಮಗಳು ಕುರಿತು ಚರ್ಚಿಸಲಾಗಿದೆ.

**ಅ) ಏಕಲವ್ಯ ದ್ರೋಣರ ಬಳಿ ವಿದ್ಯೆ ಕಲಿಯಬೇಕೆಂಬುದಕ್ಕೆ ಪ್ರೇರಣೆ.**

'ಹೆಬ್ಬೆರಳು' ನಾಟಕದಲ್ಲಿ ಏಕಲವ್ಯ ಸಣ್ಣ ವಯಸ್ಸಿನಲ್ಲೇ ತಂದೆಯಿಂದ ಹಲವು ಶಸ್ತ್ರ ವಿದ್ಯೆಗಳನ್ನು ಕಲಿತು ಪ್ರವೀಣನಾದ. ಇನ್ನೂ ಕಲಿಯಬೇಕಾದುದು ಎಷ್ಟೋ ಇದೆ ಎಂದು ಆಲೋಚಿಸುತ್ತಿರುವಾಗ ಕುರುಕುಲದ ಮಕ್ಕಳಿಗೆ ಅನೇಕ ಶಸ್ತ್ರಾಸ್ತ್ರವಿದ್ಯೆಗಳನ್ನು ಕಲಿಸುತ್ತಿರುವ ದ್ರೋಣನ ಬಗ್ಗೆ ಗೊಂದಳದವರಿಂದ ಏಕಲವ್ಯನಿಗೆ ತಿಳಿಯುತ್ತದೆ. ಇದರಿಂದ ಪ್ರೇರಿತನಾಗಿ ತಕ್ಷಣವೇ ದ್ರೋಣನರ ಬಳಿ ಹೋಗಿ ಬಿಲ್ಲು ವಿದ್ಯೆ ಕಲಿತು ಬರುತ್ತೇನೆಂದು ಬಾಲ್ಯ ಸಹಜವಾದ ಕುತೂಹಲದಿಂದ ಹೇಳುತ್ತಾನೆ. ಈತನಿಗೆ ಅಂದಿನ ಸಾಮಾಜಿಕ ಕಟ್ಟುಪಾಡುಗಳ ಬಗ್ಗೆ ಅರಿವಿಲ್ಲ, ಅಂದು ಇದ್ದ ವರ್ಣಾಶ್ರಮ ಪದ್ಧತಿಯ ತಾರತಮ್ಯದ ಬಗ್ಗೆ, ಆರ್ಯರು ಮತ್ತು ಅನಾರ್ಯರ ನಡುವಿನ ಅಂತರದ ಬಗ್ಗೆ ತಿಳಿಯದೆ ಹೋಗಲು ಅನುವಾಗುತ್ತಾನೆ. ತಂದೆ ಹಿರಣ್ಯಧನು ಹೀಗೆ ಹೇಳುತ್ತಾನೆ.

ಹಿರಣ್ಯಧನು :"ಎಲೆ ಮರುಳೆ,

ಮೊದಲೆ ಆರ್ಯಂ, ಮೇಲೆ ಪಾರ್ವನಾತಂ, ನಮಗೆ
ಕರಿಯ ಬಿಲ್ಲರನಾರ್ಯರಿಗೆ ಹೇಳುವನೇ ? ----

Cover Page

INTERNATIONAL JOURNAL OF MULTIDISCIPLINARY EDUCATIONAL RESEARCH
ISSN:2277-7881(Print); IMPACT FACTOR :10.16(2026); IC VALUE:5.16; ISI VALUE:2.286
PEER REVIEWED AND REFEREED INTERNATIONAL JOURNAL
(Fulfilled Suggests Parameters of UGC by IJMER)
Volume:15, Issue:2(6), February 2026
Scopus Review ID: A2B96D3ACF3FEA2A
Article Received: Reviewed: Accepted
Publisher: Sucharitha Publication, India
Online Copy of Article Publication Available: www.ijmer.in

----- ಗೆಣಸು ಗೂರುವಂತೆಕ್ಕಲಂ ಜಾಡಿಸದೆ ಬಿಡ ನಿನ್ನ!"[1]

ಮೊದಲೆ ಆರ್ಯಂ ಮೇಲಾಗಿ ಬ್ರಾಹ್ಮಣನು ಆದ ದ್ರೋಣನು ನಿನಗೆ ವಿದ್ಯೆಯನ್ನು ಕಲಿಸುವುದಿಲ್ಲ. ಹಂದಿಯು ನೆಲಗೆಣಸನ್ನು ಗುದ್ದುವಂತೆ ನಿನ್ನನ್ನು ಗುದ್ದಿ ಹೊರಗೆ ಕಳುಹಿಸುತ್ತಾನೆಂದಾಗ ಏಕಲವ್ಯನು ತಂದೆಯನ್ನು ಕಾಡಿ ಬೇಡಿ ಒಪ್ಪಿಸಿ ಬಿಲ್ವಿದ್ಯೆ ಕಲಿಯಲು ಹಸ್ತಿನಾಪುರಕ್ಕೆ ಹೋಗುತ್ತಾನೆ.

ಬೆರಳ್ ಗೆ ಕೊರಳ್ ನಾಟಕದಲ್ಲಿ ಹಿರಣ್ಯಧನುವಿನಿಂದಲೇ ದ್ರೋಣಾಚಾರ್ಯರ ಬಿಲ್ವಿದ್ಯೆಯ ಮಹಿಮೆ ತಿಳಿದು ಉತ್ಸಾಹಗೊಂಡು ದ್ರೋಣರ ಬಳಿ ಶಿಷ್ಯನಾಗಲು ಸಿದ್ಧನಾದಾಗ ಹಿರಣ್ಯಧನು ಹೀಗೆ ಹೇಳುತ್ತಾನೆ.

ಹಿರಣ್ಯಧನು: "ಬಿಯದರ್ಗೆ ಒವಜುಗೆಯ್ಯಲ್ಕೆ ಒಪ್ಪರ್
ನಿನ್ನನ್ ಗಹಗಹಿಸಿ ನಕ್ಕು ನೂಂಕುವರ್" [2] ಎನ್ನುತ್ತಾನೆ.

ಮಗನ ಉತ್ಸಾಹ ನೋಡಿ ಅವನನ್ನು ತಡೆಯಲಾರದೆ ಬಿಲ್ವಿದ್ಯೆ ಕಲಿಯಲು ಕಳುಹಿಸುತ್ತಾನೆ.

'ಏಕಲವ್ಯ' ನಾಟಕದಲ್ಲಿ ನಾಡಿನವರು ಕಾಡಿನ ಸಂಪತ್ತನ್ನು ನಾಶಮಾಡುತಿದ್ದಾಗ ಅವರನ್ನು ಎದುರಿಸಲು ಅವರ ದಬ್ಬಾಳಿಕೆಯನ್ನು ನಿಲ್ಲಿಸಲು ಕಾಡಿನವರು ಸಮರ್ಥರಾಗಬೇಕಿದೆ.

ಕಾಡಣ್ಣ :"ಅದೇನು ವರಸೆ! ಅದೇನ್ ಕಥೆ! ಅವರು ಬಿಟ್ಟ ಒಂದೊಂದು
ಬಾಣನು ಕಣ್ಣುಮುಚ್ಚಿಕಣ್ ಬಿಡೋದ್‌ರಾಗೆ ಒಂದೊಂದು
ಗಾವುದ ದೂರ ಹೋಯ್ತುವೆ". [3]

ಈ ಮಾತುಗಳನ್ನು ಕೇಳಿಸಿಕೊಂಡ ಏಕಲವ್ಯನು ನಾವು ನಾಡಿನವರಿಗೆ ಸಮನಾಗಲು ಹೆಚ್ಚಿನ ಬಿಲ್ಲುವಿದ್ಯೆಯನ್ನು ಎಲ್ಲಿ? ಹೇಗೆ? ಯಾರಿಂದ? ಕಲಿಯುವುದೆಂದು ಚಿಂತಿಸುತ್ತಿದ್ದಾಗ ಅವನ ತಾಯಿಯಿಂದ ದ್ರೋಣಾಚಾರ್ಯ ಬಿಲ್ವಿದ್ಯಾ ಮಹಿಮೆ ತಿಳಿಯುತ್ತದೆ. ಬಿಲ್ವಿದ್ಯೆ ಕಲಿಯಲು ಗುರುವಿನ ಬಳಿ ಹೊರಡಲು ಸಿದ್ಧನಾದಾಗ ಅವರ ಮಾವ ಹೀಗೆ ಹೇಳುತ್ತಾನೆ. " ನಿನ್ನ ಆಸೆ ನೋಡಿ ನನಗೂ ಸಂತೋಷ ಏಕಲವ್ಯ, ಆದರೆ ದ್ರೋಣಾಚಾರ್ಯರು ನಿನಗೆ ಇದ್ಯೆ ಕಲಿಸಲ್ಲ. ನೀನು ಅಲ್ಲಿಗೆ ಹೋದರೇನೆ ಅವರಿಗೆ ಸೂತಕ. ಇನ್ನೂ ಇದ್ಯೆ ಕಲಿಸ್ತಾರ, ಬ್ಯಾಡ."[4] ಎನ್ನುತ್ತಾನೆ. ಆದರೆ ಏಕಲವ್ಯನು ತಾಯಿಯ ಸಹಾಯದಿಂದ ಅವರ ಮಾವನ್ನನ್ನು ಒಪ್ಪಿಸಿ ಬಿಲ್ವಿದ್ಯೆ ಕಲಿಯಲು ಹೋಗುತ್ತಾನೆ.

ಮೂರು ನಾಟಕಗಳಲ್ಲಿ ಏಕಲವ್ಯನು ಹೆಚ್ಚಿನ ಬಿಲ್ವಿದ್ಯೆಯನ್ನು ಕಲಿಯುವುದರ ಹಿಂದಿನ ಉದ್ದೇಶ ಗಮನಿಸಿದೆರೆ, ಹೆಬ್ಬೆರಳು ಮತ್ತು ಬೆರಳ್ ಗೆ ಕೊರಳ್ ನಾಟಕಗಳಲ್ಲಿ ತಂದೆಯಿಂದ ಕಾಡಿನ ಬೇಡರಿಗೆ ಸಹಜವಾಗಿ ಬೇಕಾದ ವಿದ್ಯೆಯನ್ನು ಏಕಲವ್ಯ ಕಲಿತ್ತಿದ್ದಾನೆ. ಇನ್ನೂ ಹೆಚ್ಚಿನ ಸಾಮರ್ಥ್ಯ ಪಡೆಯಲು ದ್ರೋಣರ ಬಳಿ ಹೋಗುವುದು ಕಂಡು ಬರುತ್ತದೆ. ಆದರೆ 'ಏಕಲವ್ಯ' ನಾಟಕದಲ್ಲಿ ಕಾಡು ಮತ್ತು ಕಾಡಿನ ಬೇಡರ ಸಂರಕ್ಷಣೆಗಾಗಿ ಹೆಚ್ಚಿನ ವಿದ್ಯೆ ಕಲಿಯಲು

---

[1] ಗೋವಿಂದಪ್ಪ, 1946, ಹೆಬ್ಬೆರಳು, ಮಂಗಳೂರು, ಪು 3

[2] ಕುವೆಂಪು, 2023, ಬೆರಳ್ ಗೆ ಕೊರಳ್, ಉದಯರವಿ ಪ್ರಕಾಶನ ಮೈಸೂರು, ಪು 12

[3] ಸಿದ್ಧಲಿಂಗಯ್ಯ, 2020, ಏಕಲವ್ಯ, ಅಂಕಿತ ಪುಸ್ತಕ ಪ್ರಕಾಶನ,ಬೆಂಗಳೂರು, ಪು 25

[4] ಸಿದ್ಧಲಿಂಗಯ್ಯ, 2020, ಏಕಲವ್ಯ, ಅಂಕಿತ ಪುಸ್ತಕ ಪ್ರಕಾಶನ,ಬೆಂಗಳೂರು, ಪು 28

ಹಂಬಲಿಸುತ್ತಾನೆ. ಇದು ಸಾರ್ಥಕವಾಗುತ್ತದೆ. ವಿದ್ಯೆಯಂಬುದು ಯಾವಾಗಲು ಸ್ವಾರ್ಥಸಾಧನೆಯ ಗುರಿಯಾಗಿರಬಾರದು, ಸಮಾಜೋಪಯೋಗಿಯಾಗಿರಬೇಕು ಎಂಬುದಕ್ಕೆ ಇದು ಉತ್ತಮ ನಿದರ್ಶನವಾಗಿದೆ.

**ಆ) ದ್ರೋಣಾಚಾರ್ಯರು ಏಕಲವ್ಯನನ್ನು ಶಿಷ್ಯನಾಗಿ ಸ್ವೀಕರಿಸದಿರಲು ಕಾರಣಗಳು**

'ಹೆಬ್ಬೆರಳು' ನಾಟಕದಲ್ಲಿ ಏಕಲವ್ಯನು ದ್ರೋಣರನ್ನು ದಾರಿಯಲ್ಲಿ ಕಂಡು ನಮಸ್ಕರಿಸಿ ಬಿಲ್ವಿದ್ಯೆ ಕಲಿಯುವ ತನ್ನ ಆಕಾಂಕ್ಷೆಯನ್ನು ತಿಳಿಸಿದಾಗ ನಾಳೆ ಬಂದು ಕಾಣಲು ಹೇಳುತ್ತಾನೆ. ಮರುದಿನ ದ್ರೋಣನನ್ನು ಕಂಡಾಗ ಹೀಗೆ ಹೇಳುತ್ತಾನೆ.

ದ್ರೋಣ: "ನಿನ್ನೆ ಕಂಡಿಹೆನವನ ಚಾಪಾಗಮವ ಕಲಿವ
ನಂತೆ! ನಾನದನವನಿಗೆ ಕಲಿಸಬೇಕಂತೆ! ಏ
ನುದ್ಧಟಂ! ನಿಷಾದಮಮಾ ಧನುರ್ವೇದವೇ!
ಕ್ಷತ್ರದಾರಕರ ಸಹವಾಸದೊಳ್ ಶಿಕ್ಷಣವೆ?".[5] ಎಂದು ಆಕ್ಷೇಪಿಸುತ್ತಾನೆ.

ಕುರುಕುವರರು ಒಪ್ಪಿದರೆ ಜೊತೆಯಲ್ಲಿ ಕಲಿಸಲು ಅಡ್ಡಿಯಿಲ್ಲ ಎಂದು ಕುರುಕುವರರ ಅಭಿಪ್ರಾಯವನ್ನು ಕೇಳುತ್ತಾನೆ. ಧರ್ಮಜನನ್ನು ಬಿಟ್ಟು ಯಾರು ಅದಕ್ಕೆ ಒಪ್ಪಲಿಲ್ಲ. ಅದಕ್ಕೆ ಉತ್ತರವಾಗಿ

**ದ್ರೋಣ** : ನೀ ಬಿಲ್ಲ ಶಾವಕಂ, ನೀನನಾರ್ಯಕಿಶೋರ. ನಿನಗೆ ಪಂಚಮ ವೇದವಂ ಕಲಿಸಲಾಸೆ!"[6]

ಶಾಸ್ತ್ರದ ಹೆಸರಿನಲ್ಲಿ ಬಿಲ್ವಿದ್ಯೆಯನ್ನು ಕಲಿಸಲು ತಿರಸ್ಕರಿಸುತ್ತಾನೆ. ಅನಾರ್ಯರು ಮನುಷ್ಯರಲ್ಲವೆ ಎನ್ನುವ ಏಕಲವ್ಯನ ಪ್ರಶ್ನೆಗೆ ಮರಗಳಲ್ಲಿ ಎಲ್ಲಾ ಮರಗಳು ಸಮ ಎತ್ತರಕ್ಕೆ ಬೆಳೆಯಲಾರವು. ಮೃಗಗಳಲ್ಲಿ ಎಲ್ಲವೂ ಸಮಾನವಾದ ಶಕ್ತಿಯನ್ನು ಹೊಂದಿರಲಾರವು ಹಾಗೆಯೇ ಮನುಷ್ಯರೆಲ್ಲರೂ ಸಮಾನರಲ್ಲ ಎಂದು ವರ್ಣಾಶ್ರಮ ಧರ್ಮದ ಮೌಲ್ಯಗಳನ್ನು ಕಟ್ಟುಪಾಡುಗಳನ್ನು ಕಾಪಾಡುವವನಾಗಿ ಕಂಡುಬರುತ್ತಾನೆ.

**ದ್ರೋಣ** : "ಬ್ರಾಹ್ಮಣಂ, ವರ್ಣಧರ್ಮವನಧಃಪಾತಿಸಲೇ
ಶಾಸ್ತ್ರವಂ ಗಂಗೆಗೆಸೆಯಲೆ? ದ್ವಿಜರ ವಿದ್ಯಯಂ
ಬಿಲ್ಲಗೊರೆಯಲೆ? ಕ್ಷತ್ರೋಪಜೀಯಾಂ
ವರ್ಣ ಸಂಕರವಾಗದಂತೆ ಪಾಲಿಪ ರಾಜ ನೀತಿಗಾಂ ವ್ಯಾಘಾತ ಒಡ್ಡಲೆ?"[7]

ಇಲ್ಲಿ ದ್ರೋಣಾಚಾರ್ಯರೇ ಆರ್ಯ ಮತ್ತು ಅನಾರ್ಯ ಸಂಸ್ಕೃತಿಗಳ ನಡುವಿನ ತರತಮ ಭಾವ ಹಾಗೂ ಶೋಷಣೆಯನ್ನು ಮುಂದುವರಿಯಲು ತಾನೇ ಬೆಂಬಲ ನೀಡುತ್ತಿರುವುದು ಕಂಡುಬರುತ್ತದೆ.

---

[5] ಗೋವಿಂದಪ್ಪೈ , 1946, ಹೆಬ್ಬೆರಳು, ಮಂಗಳೂರು, ಪು 9

[6] ಗೋವಿಂದಪ್ಪೈ,1946, ಹೆಬ್ಬೆರಳು, ಮಂಗಳೂರು,ಪು 10

[7] ಗೋವಿಂದಪ್ಪೈ,1946, ಹೆಬ್ಬೆರಳು, ಮಂಗಳೂರು,ಪು 11

Cover Page

INTERNATIONAL JOURNAL OF MULTIDISCIPLINARY EDUCATIONAL RESEARCH
ISSN:2277-7881(Print); IMPACT FACTOR :10.16(2026); IC VALUE:5.16; ISI VALUE:2.286
PEER REVIEWED AND REFEREED INTERNATIONAL JOURNAL
(Fulfilled Suggests Parameters of UGC by IJMER)
Volume:15, Issue:2(6), February 2026
Scopus Review ID: A2B96D3ACF3FEA2A
Article Received: Reviewed: Accepted
Publisher: Sucharitha Publication, India
Online Copy of Article Publication Available: www.ijmer.in

'ಬೆರಳ್ ಗೆ ಕೊರಳ್' ನಾಟಕದಲ್ಲಿ ದ್ರೋಣರು ಏಕಲವ್ಯನನ್ನು ಶಿಷ್ಯನಾಗಿ ಸ್ವೀಕರಿಸಲು ಸಿದ್ಧನಿರುತ್ತಾನೆ. ಆದರೆ ಅರಸು ಮಕ್ಕಳ ಅಸೂಯೆ ಅಡ್ಡಬರುತ್ತದೆ. 'ಶೂದ್ರನೊಡನೆಮಗೆ ಸಮಚರ್ಯೆ ಸಲ್ಲದೆಂದಾಡಿದರು' ಅದಕ್ಕೆ ದ್ರೋಣರು "ಶೂದ್ರನಾಡಮೇನ್ ಸಮರ್ಥನ್, ವಿನಯಶಾಲಿ, ಕಲ್ತ ಮೇಲಿಂ ಬಳಿಂ ನಿಮಗೆ ಸಲ್ವನ್, ನಿಮ್ಮ ಸೇವೆಯೊಳ್ ನಿಲ್ವನ್"[8] ಎಂದು ಏಕಲವ್ಯನ ಪರವಾಗಿ ಮಾತಾಡುತ್ತಾನೆ. ಆದರೂ ಅರಸು ಮಕ್ಕಳು ಒಪ್ಪಲಿಲ್ಲ. ಅಕ್ಷರ ವಿದ್ಯೆ ಹಾಗೂ ಬಿಲ್ವಿದ್ಯೆ ಇವೆರಡು ಮೇಲುವರ್ಣದರಿಗೆ ಮೀಸಲು ಅವನ್ನು ಶೂದ್ರರು ಪಡೆಯಬಾರದೆಂಬ ನಿಲುವು ವ್ಯಕ್ತವಾಗಿದೆ. ಏಕಲವ್ಯ ವಿದ್ಯೆ ಕಲಿತರು ಅದರ ಲಾಭ ಅರಸರಿಗೇ ಅಲ್ಲವೇ ಎಂದು ಸಹಜವಾಗಿ ಹೇಳಿದರೂ ಅಂದಿನ ಸಾಮಾಜಿಕ ಸ್ಥಿತಿಯನ್ನು ಹೇಳುತ್ತದೆ. ಕಂಬನಿ ತುಂಬಿದ ಏಕಲವ್ಯನ್ನನ್ನು ಕಂಡು ದ್ರೋಣರು

" ಅಳಲದಿರ್ ಆಸೆಗೆಡದಿರ್
ನೀನೆಮ್ಮ ಮನೆಯೊಳಾಳಾಗಿರು
ಈ ಗರುಡಿಗೆನ್ನ ಸೇವೆಗೈತರುತೆ
ದೂರದಿಂ ಕಂಡು ಕಲಿ ಕಲ್ವನಿತಂ
ಮತ್ತುಳಿದುದಂ ಮನೆಯೊಳೆಯೆ ಕಲಿಯುವನಿತಂ
ಕಲಿಪೆನಶ್ವತ್ಥಾಮನೊಡನೆ" [9]

ಇದರಿಂದ ಕುವೆಂಪು ದ್ರೋಣರ ವ್ಯಕ್ತಿತ್ವವನ್ನು ಔನತ್ಯಕ್ಕೆರಿಸಿದ್ದಾರೆ. ಮುಂದೆ ಏಕಲವ್ಯನು ತಂದೆಯ ಮರಣ ವಾರ್ತೆ ತಿಳಿದು ಕಾಡಿಗೆ ಹಿಂತಿರುಗುತ್ತಾನೆ. ಇಲ್ಲಿ ದ್ರೋಣನ ಪಾತ್ರವನ್ನು ಕುವೆಂಪು ಮೂಲಕ್ಕಿಂತ ಸಂಪೂರ್ಣ ಭಿನ್ನರೀತಿಯಲ್ಲಿ ಚಿತ್ರಿಸಿದ್ದಾನೆ. ಏಕಲವ್ಯನ ಗುರುಭಕ್ತಿಗೆ ಅದ್ಭುತ ಹಿನ್ನೆಲೆಯನ್ನು ಕುವೆಂಪು ಇಲ್ಲಿ ಕಲ್ಪಿಸಿದ್ದಾರೆ. ಇಂಥ ಗುರುವಿಗೆ ಏಕಲವ್ಯ ತನ್ನ ಹೆಬ್ಬೆರಳನ್ನು ದಕ್ಷಿಣೆಯಾಗಿ ನೀಡುವುದರಲ್ಲಿ ಅರ್ಥವಿದೆ. ಮೂಲದಲ್ಲಿ ದ್ರೋಣ ಏಕಲವ್ಯನಿಗೆ ಶಿಷ್ಯತ್ವವನ್ನು ನಿರಾಕರಿಸುತ್ತಾನೆ. ಆದರೆ ಆತ ಶ್ರದ್ಧೆಯಿಂದ ದ್ರೋಣ ಪ್ರತೀಕವನ್ನು ಗುರುವಾಗಿ ಸ್ವೀಕರಿಸಿ ವಿದ್ಯೆ ಕಲಿಯುತ್ತಾನೆ. ಆದರೆ ಇಲ್ಲಿ ದ್ರೋಣನ ಆಶೀರ್ವಾದ ಏಕಲವ್ಯನಿಗಿದೆ. ಇದು ಕುವೆಂಪು ಅವರ ಅರ್ಥಪೂರ್ಣ ಬದಲಾವಣೆಯಾಗಿದೆ.

'ಏಕಲವ್ಯ' ನಾಟಕದಲ್ಲಿ ಬಿಲ್ವಿದ್ಯೆ ಕಲಿಯಲು ಬಂದ ಏಕಲವ್ಯನ್ನನ್ನು ಅರ್ಜುನ ಮತ್ತು ಭೀಮ ತುಂಬಾ ಹೀನಾಯವಾಗಿ ಮಾತನಾಡುತ್ತಾರೆ. " ಏ ಕಾಡಿನ ಕ್ರಿಮಿ, ಒಳಗೆ ಬರಲು ಎಷ್ಟೋ ಧೈರ್ಯನಿನಗೆ? ಏ ಬೇಡ ಜಂತು ಯಾವುದು ಎಲ್ಲಿರಬೇಕೋ ಅಲ್ಲಿರ ಬೇಕು, ತಿಳಿದಕೊ ಎಂದು ಹೀಯಾಳಿಸುತ್ತಾರೆ. ಆದರೂ ತಾನು ಬಿಲ್ವಿದ್ಯೆ ಕಲಿಯುದರ ಹಿಂದಿನ ಉದ್ದೇಶವನ್ನು ಸ್ಪಷ್ಟವಾಗಿ ಗುರುಗಳಿಗೆ ಹೇಳುತ್ತಾನೆ.

[8] ಕುವೆಂಪು, 2023, ಬೆರಳ್ ಗೆ ಕೊರಳ್, ಉದಯರವಿ ಪ್ರಕಾಶನ ಮೈಸೂರು, ಪು 14

[9] ಕುವೆಂಪು, 2023, ಬೆರಳ್ ಗೆ ಕೊರಳ್, ಉದಯರವಿ ಪ್ರಕಾಶನ ಮೈಸೂರು, ಪು 15

INTERNATIONAL JOURNAL OF MULTIDISCIPLINARY EDUCATIONAL RESEARCH
ISSN:2277-7881(Print); IMPACT FACTOR :10.16(2026); IC VALUE:5.16; ISI VALUE:2.286
PEER REVIEWED AND REFEREED INTERNATIONAL JOURNAL
(Fulfilled Suggests Parameters of UGC by IJMER)
Volume:15, Issue:2(6), February 2026
Scopus Review ID: A2B96D3ACF3FEA2A
Article Received: Reviewed: Accepted
Publisher: Sucharitha Publication, India
Online Copy of Article Publication Available: www.ijmer.in

**ಏಕಲವ್ಯ:** ಹೌದು ಆಚಾರ್ಯ, ಕಾಡಿನ ಪ್ರಾಣಿ ಪಕ್ಷಿಗಳನ್ನು ಕಾಡಿನ ಸಿರಿಯನ್ನು ಕಾಪಾಡುವ ಹೊಣೆ ನನ್ನ ಪಾಲಿನದಾಗಿದೆ. ದಯಮಾಡಿ ನನ್ನನ್ನು ದೊಡ್ಡ ಬಿಲ್ಲುಗಾರನನ್ನಾಗಿ ಮಾಡಿ ಗುರುದೇವ.

**ದ್ರೋಣ :** ಏಕಲವ್ಯ ನಿನ್ನ ಆಸಕ್ತಿ, ಶ್ರದ್ಧೆ ಮೆಚ್ಚತಕ್ಕದೆ, ಆದರೆ ಶಾಸ್ತ್ರ ಅಡ್ಡವಿದೆ. ಶೂದ್ರನಿಗೆ ಗುರುಮುಖೇನ ವಿದ್ಯೆ ಕಲಿಸಬಾರದೆಂದು ಶಾಸ್ತ್ರ ಸಾರಿದೆ."[10]

ಹೆಬ್ಬೆರಳು ನಾಟಕದಲ್ಲಿ ದ್ರೋಣರಿಗೆ ಕಲಿಸುವ ಇಚ್ಚೆಯೇ ಇಲ್ಲ, ಬೆರಳ್ ಗೆ ಕೊರಳ್ ನಾಟಕದಲ್ಲಿ ದ್ರೋಣರಿಗೆ ಆಸಕ್ತಿ ಇದೆ ಆದರೆ ಅರಸು ಮಕ್ಕಳು ಅಡ್ಡಬರುತ್ತಾರೆ ಏಕಲವ್ಯ ನಾಟಕದಲ್ಲಿ ದ್ರೋಣರಿಗೆ ಶಾಸ್ತ್ರ ಅಡ್ಡ ಬರುತ್ತದೆ.

**ಇ) ಗುರುದಕ್ಷಿಣೆ ಪಡೆಯುವ ವಿಧಾನ**

ಹೆಬ್ಬೆರಳು ನಾಟಕದಲ್ಲಿ ಏಕಲವ್ಯನನ್ನು ಶಿಷ್ಯನಾಗಿ ದ್ರೋಣರು ಸ್ವಿಕರಿಸಲಿಲ್ಲ. ಇದುವರೆಗೂ ನಡೆದು ಬಂದ ವರ್ಣಾಶ್ರಮ ಪದ್ಧತಿಯ ಮೌಲ್ಯಗಳ ಮೀರುವುದಿಲ್ಲ. ಏಕಲವ್ಯನ ಬಲವಂತಕ್ಕೆ ಆರ್ಶೀವಾದ ಮಾಡಿ ಕಳುಹಿಸುತ್ತಾನೆ. ಬಿಲ್ವಿದ್ಯೆಯನ್ನು ಸ್ವಯಂ ಶ್ರದ್ಧೆಯಿಂದ ಕಲಿತ ನಂತರ ಏಕಲವ್ಯ ತಾನೇ ಹೋಗಿ ಗುರುದಕ್ಷಿಣೆ ನೀಡಿ ಬರುತ್ತೇನೆ ಎಂದಾಗ ಹಿರಣ್ಯಧನು ಬೇಡವೆನ್ನುತ್ತಾನೆ.


**ಹಿರಣ್ಯಧನು:** "ಹಿಂದೊಮ್ಮೆ ನೀನಲ್ಲಿ ಹೋಗೆ ನಿನ್ನಯ ಬಯಕೆ
ನೆರೆಯದೆಂದರಿತೊಡಂ ನಿನ್ನ ಜೀವಕೆ ಮೊಸ
ವಿರದೆಂದೆ ಬೀಳ್ಕೊಟ್ಟೆ ನಿನ್ನನೀ ಹೊಸ ಮುಖಾ
ಮುಖಿಯೋ ಜೀವಕ್ಕೆ ಮುಳುವೆಂದೆ ಮನಸಿನ ಕವಲು
ಕೆಯ್ಗೆ ಬರುವುದೋ? ಕಂಗೆ ಬರುವುದೋ? ಜೀವಕ್ಕೆ ಬಹುದೋ?
----------ಕಟ್ಟುಕ್ಕುತಿದೆ". [11]

ನಾಗರೀಕ ಸಮಾಜವು ಸೃಜನಶೀಲ ಪ್ರತಿಭೆಯನ್ನು ನಾಶಪಡಿಸುವುದೆಂದು ಹಿರಣ್ಯಧನುವಿನ ಭಯ. ಆದರೆ ಏಕಲವ್ಯ ಒಪ್ಪದೆ " ಕೊಂಡ ಸಾಲವ ಕೊಡದೆ ನೂರ್ಕೆಡುಕನೆನಿಸಲೇ, ನೆಮ್ಮ ಬಳಿಯನೆ ಸಾಲದೊಳಗದ್ದಿಸಲೆ ತಾತ ? ಎನ್ನುತ್ತಾನೆ. ಗುರುವಿನ ಋಣ ಗುರುದಕ್ಷಿಣೆ ನೀಡಿ ತೀರಿಸಬೇಕು. ಇಲ್ಲದಿದ್ದರೆ ಕಲಿತ ವಿದ್ಯೆಗೆ ಸಾರ್ಥಕತೆಯಿಲ್ಲ ಗುರುದಕ್ಷಿಣೆ ನೀಡದೆ ನಮ್ಮ ವಂಶವನ್ನು ಗುರು ಋಣದಲ್ಲಿಯೇ ಜೀವಿಸಲು ಬಿಡಲೆ ಎನ್ನುತ್ತಾನೆ. ಗುರುದಕ್ಷಿಣೆ ನೀಡಲು ತಾನೇ ಹಸ್ತಿನಾಪುರಕ್ಕೆ ಹೋಗಲು ಅನುವಾದಾಗ ಗುರುಗಳ ಆಗಮನವೇ ಕಾಡಿನ ಕಡೆಗೆ ಬರುತ್ತದೆ. ಆಗ ಏಕಲವ್ಯನು ಸಂತೋಷಭರಿತನಾಗಿ ಆನಂದ ತುಂದಿಲನಾಗುತ್ತಾನೆ. ದ್ರೋಣರು ತಾನು ವಿದ್ಯೆ ಕಲಿಸಿದ ಕುರುವಂಶದ ಬಾಲರು

---

[10] ಸಿದ್ಧಲಿಂಗಯ್ಯ, 2020, ಏಕಲವ್ಯ, ಅಂಕಿತ ಪುಸ್ತಕ ಪ್ರಕಾಶನ,ಬೆಂಗಳೂರು, ಪು 31

[11] ಗೋವಿಂದಪೈ,1946, ಹೆಬ್ಬೆರಳು, ಮಂಗಳೂರು,ಪು 19


Cover Page

INTERNATIONAL JOURNAL OF MULTIDISCIPLINARY EDUCATIONAL RESEARCH
ISSN:2277-7881(Print); IMPACT FACTOR :10.16(2026); IC VALUE:5.16; ISI VALUE:2.286
PEER REVIEWED AND REFEREED INTERNATIONAL JOURNAL
(Fulfilled Suggests Parameters of UGC by IJMER)
Volume:15, Issue:2(6), February 2026
Scopus Review ID: A2B96D3ACF3FEA2A
Article Received: Reviewed: Accepted
Publisher: Sucharitha Publication, India
Online Copy of Article Publication Available: www.ijmer.in

ದಾಯಾದಿ ಮತ್ಸರದಿಂದ ಕುದಿಯುತ್ತಿದ್ದಾರೆ. ಯಾವ ದಾವಾಗ್ನಿ ಧಗಿಸುವುದೋ ಎಂದು ಚಿಂತಿಸುತ್ತಿರುವಾಗ ಅರ್ಜುನ ಬಂದು ಏಕಲವ್ಯನ ಬಿಲ್ವಿದ್ಯಾ ಪ್ರವೀಣತೆಯನ್ನು, ಅವನ ಗುರುಗಳು ನೀವಂತೆ ಎಂದು ತಿಳಿಸುತ್ತಾನೆ. ಅರ್ಜುನನ ಒಡಗೂಡಿ ಬಂದ ದ್ರೋಣನು ಏಕಲವ್ಯನು ವಿದ್ಯೆ ಕಲಿತ ವಿಧಾನವನ್ನು ತಿಳಿದು ಗುರುದಕ್ಷಿಣೆ ಕೇಳುತ್ತಾನೆ.

**ಏಕಲವ್ಯ:** ಹೆಸರಿಸಿ ದೇವ ದಕ್ಷಿಣೆಯ, ತಮ್ಮಲ್ಲಿ ಕಲಿತ ವಿದ್ಯೆಗೀ ಜೀವವನೆ ಮಾರಿತ್ತೆ

**ದ್ರೋಣ:** ನಿನ್ನ ಬಲಗಯ್ಯ ಹೆಬ್ಬೆರಳನೀ ಎನೆ ಕಂದ ?

ಏಕಲವ್ಯ: ಇತ್ತನಿದೊ ಗುರುದೇವ!"[12] ಎಂದು ತನ್ನ ಬಲಗೈಯ ಹೆಬ್ಬೆರಳನ್ನು ಕತ್ತರಿಸಿ ಕೊಡುತ್ತಾನೆ. ಆಗ ದ್ರೋಣರು ವಿನೋದಕ್ಕಾಗಿ ಕೇಳಿದೆ ನೀನು ದುಡುಕಿಬಿಟ್ಟೆ ಎನ್ನುತ್ತಾನೆ. ನಂತರ ನಾರಾಯಣಂ ನಿನ್ನನ್ನು ರಕ್ಷಿಸಲಿ, ಚಿರಕಾಲ ಬಾಲಿರ್ರೆ ಎಂದು ಅರಸಿದರೆ ಪ್ರಯೋಜನವಿಲ್ಲ. ಇಲ್ಲಿ ದ್ರೋಣರ ನಡೆ,ನುಡಿ ಮತ್ತು ವ್ಯಕ್ತಿತ್ವದ ಅದಃಪತನ ಗೋಚರಿಸುತ್ತದೆ.

**'ಬೆರಳ್ ಗೆ ಕೊರಳ್'** ನಾಟಕದಲ್ಲಿ ಅರ್ಜುನನಿಂದ ಏಕಲವ್ಯನ ಬಿಲ್ವಿದ್ಯೆಯ ಪ್ರವೀಣತೆ ತಿಳಿದು ಕಾಡಿಗೆ ಬರುತ್ತಾನೆ. ದ್ರೋಣರು ಕಾಡಿಗೆ ಬರುವ ವಿಚಾರವು ಏಕಲವ್ಯನಿಗೆ ಅಶ್ವತ್ಥಾಮನಿಂದ ತಿಳಿಯುತ್ತದೆ. ಏಕಲವ್ಯನು ಇಂದು ನನ್ನ ಜನ್ಮ ಪಾವನವಾಗುವ ಸುದಿನವೆಂದು ಉತ್ಸಾಹಭರಿತನಾಗಿ ಆನಂದದಿಂದ ಗುರುವಿನ ಆಗಮನಕ್ಕೆ ಕಾಯುತ್ತಿರುತ್ತಾನೆ. ಕಾಡಿಗೆ ಪ್ರವೇಶಿಸಿದ ದ್ರೋಣರು ವ್ಯಾಕುಲಚಿತ್ತರಾಗಿ ಅನ್ನದ ಹಂಗಿಗೆ ಒಳಗಾಗಿ ತಾನು ಮಾಡಲಿರುವ ಪಾಪಕಾರ್ಯ ನೆನೆದು ಮರುಗುತ್ತಾನೆ.

**ದ್ರೋಣ:** ಈ ಅಹಂಕಾರಮೆಯೆ ಮೂಲಮನಿತರ್ಕಂ
ಅಲ್ಲದಿರೆ ನಾನೇತಕಾ ಅರ್ಜುನಗೆ ಗುರುವಾಗಿ
ದ್ರುಪದನಂ ಗೆಲ್ದು ತಂದೆನ್ನಡಿಗೆ ಕೆಡೆವವೊಲ್
ಮಾಡಿ, ನನ್ನೆರ್ದೆಯ ಬಿಂಕದ ದೆವ್ವಕೆಡೆಯಿತ್ತು
ಸವ್ಯಸಾಚಿಯ ಹಂಗಿಗೊಳಗಾಗುತಿರ್ದನೆ?
ಲೋಕತ್ರಯಂಗಳೊಳ್ ನಿನ್ನಂ ಮೀರ್ದರಿಲ್ಲಮೆನೆ
ನಿನಗೆ ಬಿಲ್ ಬಿಜ್ಜೆಯಂ ಕಲಿಪೆನೆಂದಾಡುತಿರ್ದನ್
ಈಗಳೋ ಪಿಡಿದಿರ್ಪುದಾತಂಗೆ ಕೀರ್ತಿಶನಿ
-------------ಮಾತೃ ಸೇವೆಯೊಳಿರ್ಪನ್
ತಂದೆಯಿಲ್ಲದ ತಬ್ಬಲಿ
ಆ ಕಾಡ ಬೇಡರ ಹುಡುಗನನ್ ಬೆರಳ್ ಕೊಯ್ದು

[12] ಗೋವಿಂದಪೈ,1946, ಹೆಬ್ಬೆರಳು, ಮಂಗಳೂರು,ಪು 31

Cover Page

INTERNATIONAL JOURNAL OF MULTIDISCIPLINARY EDUCATIONAL RESEARCH
ISSN:2277-7881(Print); IMPACT FACTOR :10.16(2026); IC VALUE:5.16; ISI VALUE:2.286
PEER REVIEWED AND REFEREED INTERNATIONAL JOURNAL
(Fulfilled Suggests Parameters of UGC by IJMER)
Volume:15, Issue:2(6), February 2026
Scopus Review ID: A2B96D3ACF3FEA2A
Article Received: Reviewed: Accepted
Publisher: Sucharitha Publication, India
Online Copy of Article Publication Available: www.ijmer.in

ಆ ರಕ್ತ ಪಂಕದಳಿವನ ಕೀರ್ತಿಪಂಕೇಜಮಂ ಮೆರೆಯವೇಲ್ಕಂತೆ"[13]

ಇಲ್ಲಿ ದ್ರೋಣನಿಗೆ ತಾನು ಮಾಡುತ್ತಿರುವ ಅನ್ಯಾಯದ ಸ್ಪಷ್ಟ ಅರಿವಿದೆ. ಅಶ್ವತ್ಥಾಮನು ಕೂಡ ಇದನ್ನು ಪ್ರತಿಭಟಿಸಿ "ಅರಸು ಮಕ್ಕಳ ಕೂಳ್ಗೆ ಆಳಾಗಿ ಬಾಳ್ಗೋಣನೊಡ್ಡುತಿರ್ಪಿರಿ ನರಕನಕ್ರದ ಬಾಯ್ಗೆ" ಎನ್ನುತ್ತಾನೆ. ಏಕಲವ್ಯನ ಬಳಿಗೆ ಬಂದ ದ್ರೋಣರು ನಿನ್ನ ಬಿಲ್ವಿದ್ಯೆ ಜಾಣ್ಮೆಯನ್ನು ತೋರಿಸೆಂದು ಗಗನದಲ್ಲಿ ಹಾರುತ್ತಿದ್ದ ಪಕ್ಷಿಯನ್ನು ಗುರಿಯಿಟ್ಟು ಹೊಡೆಯಲು ಹೇಳುತ್ತಾನೆ. ಅಪರಾಧವಿಲ್ಲದ ಸಾಧುವಂ ಕೊಲ್ಲಲ್ಕೆ ಅಲ್ತು ಆಚಾರ್ಯ ಇದು ನೀವು ಕಲಿಸಿದ ವಿದ್ಯೆ ಎನ್ನುತ್ತಾನೆ. ಈ ಪ್ರಸಂಗವು ಏಕಲವ್ಯನ ವ್ಯಕ್ತಿತ್ವವನ್ನು ಅತ್ಯಂತ ಪರಿಣಾಮಕಾರಿಯಾಗಿ ನಿರೂಪಿಸುತ್ತದೆ. ತಾನು ಕಲಿತ ವಿದ್ಯೆ ನಿರಪರಾಧಿಯನ್ನು ಕೊಲ್ಲಲು ಬಳಸುವಂತಹದಲ್ಲ ಎಂಬ ಆತನ ನಿಲುವು, ಗುರುವೇ ಹೇಳಿದರೂ ಪಾಪಕಾರ್ಯವನ್ನು ಮಾಡಲಾರೆನೆಂಬ ಅರಿವು ಮುಖ್ಯವಾಗುತ್ತದೆ. ನಿರಪರಾಧಿಯಾದ ಏಕಲವ್ಯನಿಗೆ ಹೇಗೆ ಶಿಕ್ಷೆ ನೀಡಲಿ ಎಂದು ಸಂಕಟವನ್ನು ಅನುಭವಿಸುತ್ತಿರುವಾಗ ಗುರುವಿನ ಸಂಕಟ ತಿಳಿದು ಅದನ್ನು ಪರಿಹರಿಸಲು ದ್ರೋಣರ ಅಪೇಕ್ಷೆಯಂತೆ ಹೆಬ್ಬೆರಳನ್ನು ಗುರುದಕ್ಷಿಣೆಯಾಗಿ ನೀಡುತ್ತಾನೆ. ಈ ಹಂತದಲ್ಲಿ ದ್ರೋಣನು ಅನುಭವಿಸುತ್ತಿದ್ದ ತೊಳಲಾಟವನ್ನು ಕುವೆಂಪು ಪರಿಣಾಕಾರಿಯಾಗಿ ಚಿತ್ರಿಸಿದ್ದಾರೆ.

'ಏಕಲವ್ಯ' ನಾಟಕದಲ್ಲಿ ದ್ರೋಣ ಮತ್ತು ಅರ್ಜುನರು ಕಾಡಿಗೆ ಬೇಟೆಗೆ ಹೋಗಿರುವಾಗ ಅಗೋಚರವಾಗಿ ಬಾಣಗಳು ನಮ್ಮ ಬೇಟೆ ನಾಯಿಯ ಬಾಯಿ ಮುಚ್ಚಿಸಿದ್ದು ದೊಡ್ಡ ವಿಸ್ಮಯ. ಈ ಸಾಹಸಿ ಮಾನವನಂತು ಅಲ್ಲ ಅವನು ದೇವನೊ ಗಂಧರ್ವನೊ ಆಗಿರಬೇಕೆಂದು ಅರ್ಜುನ ಗುರುಗಳಿಗೆ ತಿಳಿಸುತ್ತಾನೆ. ದ್ರೋಣರು ಧ್ವನಿಯನ್ನು ಗ್ರಹಿಸಿ ಬಾಣ ಪ್ರಯೋಗಿಸುವುದನ್ನು ಶಬ್ದವೇಧಿ ವಿದ್ಯೆ ಎನ್ನುವರೆಂದು ಹೇಳುತ್ತಿರುವಾಗ ಏಕಲವ್ಯನೆ ಅಲ್ಲಿಗೆ ಬಂದು ಗುರುಗಳನ್ನು ಕಂಡು ಸಂತೋಷಗೊಂಡು ತಮ್ಮ ಕೃಪೆಯಿಂದ ಇಂದು ಬಿಲ್ವಿದ್ಯಾ ಸಂಪನ್ನನಾಗಿದ್ದೇನೆ. ನಮ್ಮ ಜೊಪಡಿಗೆ ಬಂದು ನನ್ನ ಸೇವೆಯನ್ನು ಸ್ವೀಕರಿಸಬೇಕೆಂದು ಬಿನ್ನವಿಸಿಕೊಳ್ಳುತ್ತಾನೆ. ಅದರೆ ಅರ್ಜುನ ಏಕಲವ್ಯನ ಬಿಲ್ವಿದ್ಯೆ ಕಂಡು ಅಸೂಯೆ ಪಟ್ಟುಕೊಳ್ಳುತ್ತಾನೆ.

**ಅರ್ಜುನ**: ಛೆ, ಏಕಲವ್ಯ ಒಬ್ಬ ಯಃಕಶ್ಚಿತ್ ಬೇಡ, ಅವನಿಗೆ ಶಬ್ದವೇಧಿ
ವಿದ್ಯೆ ಸಿದ್ಧಿಯೇ? ಅರಸು ಕುಲದನಾವೆಲ್ಲಿ, ಕೀಲು ಕುಲದ ಈ ಕುನ್ನಿಯೆಲ್ಲಿ?

**ದ್ರೋಣ:** ವಿದ್ಯೆಗೆ ಅಂತಸ್ತಿನ ಅಂತರವಿಲ್ಲ. ಕಷ್ಟಪಟ್ಟು ಕಲಿತವರಿಗೆ
ಅದು ಒಲಿಯುತ್ತದೆಂದು ಈಗ ದೃಢಪಟ್ಟಿದೆ.

**ಏಕಲವ್ಯ:** ನನ್ನನ್ನು ಅಂದು ಹೊರಗಟ್ಟಿದ ಅರ್ಜುನ ನೀನೇ ಅಲ್ಲವೇ
ಕುಲದ ಮಾತೇಕೆ? ಶಕ್ತಿಯಿಲ್ಲದವರು ಕುಲದ ಹಿರಿಮೆಯ ಮೊರೆಹೊಗುತ್ತಾರೆ".[14]

[13] ಕುವೆಂಪು, 2023, ಬೆರಳ್ ಗೆ ಕೊರಳ್, ಉದಯರವಿ ಪ್ರಕಾಶನ ಮೈಸೂರು, ಪು 26

[14] ಸಿದ್ಧಲಿಂಗಯ್ಯ, 2020, ಏಕಲವ್ಯ, ಅಂಕಿತ ಪುಸ್ತಕ ಪ್ರಕಾಶನ,ಬೆಂಗಳೂರು, ಪು 43

Cover Page

INTERNATIONAL JOURNAL OF MULTIDISCIPLINARY EDUCATIONAL RESEARCH
ISSN:2277-7881(Print); IMPACT FACTOR :10.16(2026); IC VALUE:5.16; ISI VALUE:2.286
PEER REVIEWED AND REFEREED INTERNATIONAL JOURNAL
(Fulfilled Suggests Parameters of UGC by IJMER)
Volume:15, Issue:2(6), February 2026
Scopus Review ID: A2B96D3ACF3FEA2A
Article Received: Reviewed: Accepted
Publisher: Sucharitha Publication, India
Online Copy of Article Publication Available: www.ijmer.in

ಆಕ್ರಮಣಶೀಲತೆ, ಸರ್ವಾಧಿಕಾರೀ ಮನೋಭಾವ ಆಡಳಿತ ವರ್ಗದವರ ಸಂಸ್ಕೃತಿಯ ಪ್ರತೀಕ. ಆಧುನಿಕತೆಯ ಹೆಸರಿನಲ್ಲಿ, ಪ್ರಗತಿಯ ಹೆಸರಿನಲ್ಲಿ ಎಲ್ಲದರ ಮೇಲೆ ಹಿಡಿತ ಸಾಧಿಸುವ ಹಂಬಲ ಕಂಡುಬರುತ್ತದೆ. ತಳವರ್ಗದ ಸೃಜನಶೀಲ ಪ್ರತಿಭೆಗಳ ಏಳ್ಗೆಯನ್ನು ಸಹಿಸಲಾಗದವರು ಮೇಲ್ವರ್ಗದ ಜನರು. ಅವರು ತಮ್ಮ ಟೊಳ್ಳುತನ ಮುಚ್ಚಿಕೊಳ್ಳಲು ಜಾತಿಯ ಮೊರೆ ಹೋಗುತ್ತಾರೆಬುಂದನ್ನು ತಿಳಿಯಬಹುದು.

ದ್ರೋಣರು ಅರ್ಜುನನಿಗೆ ಕೊಟ್ಟ ವಚನದಿಂದ ಸಂಕಟಕ್ಕೆ ಗುರಿಯಾಗುತ್ತಾನೆ. ಗುರುಗಳ ಸಂಕಟ ನಿವಾರಣೆಗಾಗಿ ಅವರ ಅಪೇಕ್ಷೆಯಂತೆ ಏಕಲವ್ಯ ಹೆಬ್ಬೆರಳನ್ನು ಕತ್ತರಿಸಿಕೊಡುತ್ತಾನೆ. ಆದರೆ ಇಲ್ಲಿನ ವಿಶೇಷವೆಂದರೆ ಅಂದು ಬಿಲ್ವಿದ್ಯೆ ಕಲಿಸಿರೆಂದು ಗುರುಗಳನ್ನು ಕೇಳಲು ಬಂದಾಗ ಈ ಬೇಡ ಯಾವ ಗುರುಕಾಣಿಕೆಯನ್ನು ಕೊಡಬಲ್ಲನೆಂದು ಹಂಗಿಸಿದೆಯಲ್ಲವೇ ಇದೋ ಗುರು ಬಯಸಿದ ಕಾಣಿಕೆಯನ್ನೆಕೊಡುತ್ತಿದ್ದೇನೆಂದು ತೃಪ್ತಿಯಿಂದ ಕೊಡುತ್ತಾನೆ.

**ಈ) ಗುರುದಕ್ಷಿಣೆ ಪಡೆದ ನಂತರದ ಪರಿಣಾಮ.**

'ಹೆಬ್ಬೆರಳು' ನಾಟಕದಲ್ಲಿ ಗುರುದಕ್ಷಿಣೆಯನ್ನು ಪಡೆದ ನಂತರ ಹಿರಣ್ಯಧನು ಪುತ್ರವಾತ್ಸಲ್ಯದಿಂದ ದುಃಖಿಸುತ್ತಾನೆ. ದ್ರೋಣರು ವಿನೋದಕ್ಕಾಗಿ ಹೆಬ್ಬೆರಳನ್ನು ಕೇಳಿದೆ ತಪ್ಪಾಯಿತು ನನ್ನಿಂದ, ಮನಸಾರೆ ಶಪಿಸು ಎನ್ನುತ್ತಾನೆ. ಹಿರಣ್ಯಧನು ಹೀಗೆ ಹೇಳುತ್ತಾನೆ " ಸಪಿಸಲಾನೆಲ್ಲಿ, ಸಾಪಂಗೊಳುವ ತಾವೆಲ್ಲಿ? ತಮ್ಮ ಶಿಷ್ಯರಿಗಿವಂ ಸರಿಯಹನೊ? ಮಿಗಿಲಹನೊ? ಎಂದು ಕರುಬಿಂದ ಬೆರಳಂ ಕೇಳ್ದಿರೆಂದೆನ್ನ ಗೊಣಗುತಿಹ ಮನವ ಮಾಣಿಸಲಾಸೆ!"[15] ಎನ್ನುತ್ತಾನೆ.

ಇಲ್ಲಿ ಆರ್ಯರಿಗಿಂತ ಅನಾರ್ಯರು ಕೆಳಮಟ್ಟದವರು ಎನ್ನುವ ಭಾವನೆಯೋ, ಕಂದನ ಹೆಬ್ಬೆರಳನ್ನು ಕಳೆದುಕೊಂಡರು ಪ್ರತಿಭಟಿಸದೆ ಮೇಲ್ವರ್ಣದವರನ್ನು ಎದುರಿಸಲಾರೆವು ಎಂಬ ಕೀಳರಿಮೆಯೋ ಅಥವಾ ನಮಗೆ ಕೇಡು ಬಗೆದವರಿಗೂ ನಾವು ಲೇಸನ್ನೇ ಬಯಸುತ್ತೇವೆ ಎಂಬ ಶ್ರೇಷ್ಠ ಭಾವನೆಯೊ ಎಂದು ಗೊಂದಲವಾಗುತ್ತದೆ. ಆದರೆ ಮುಂದೆ ಮನೆಗೆ ಬಂದು ಆತಿಥ್ಯವನ್ನು ಸ್ವೀಕರಿಸಿ ಹೋಗಿ ಎಂದು ಆಹ್ವಾನ ನೀಡಿದಾಗ ಇವರ ಉದಾತ್ತ ಸಂಸ್ಕೃತಿ ಔದಾರ್ಯ ನಮಗೆ ಎದ್ದು ಕಾಣುತ್ತದೆ.

'ಬೆರಳ್ ಗೆ ಕೊರಳ್' ನಾಟಕದಲ್ಲಿ ಕುವೆಂಪು ಅವರು ಮಾಡಿಕೊಂಡಿರುವ ಬದಲಾವಣೆಗಳಲ್ಲಿ ಪ್ರಮುಖವಾದುದು ತಾಯಿಯ ಪಾತ್ರ. ಏಕಲವ್ಯನ ಬದುಕಿನಲ್ಲಿ ತಾಯಿ ಆತನ ಉಸಿರು, ಆಕೆಯ ಮಮತೆಯ ಮಡಿಲಲ್ಲಿ ಆತ ಬೆಳೆದಿದ್ದಾನೆ. ಆತನಿಗೆ ಮನುಷ್ಯ ಸಂಬಂಧವಿರಿವುದು ಕಾಡಿನಲ್ಲಿ ಅಬ್ಬೆಯೊಂದಿಗೆ ಮಾತ್ರ ಉಳಿದಂತೆ ಕಾಡಿನ ಪ್ರಾಣಿಗಳು ಹಾಗೂ ದ್ರೋಣನ ಗೊಂಬೆಗಳು ಅತನ ಸಂಗಾತಿಗಳು. ತಾಯಿಗೂ ಅಷ್ಟೇ ಏಕಲವ್ಯನೇ

[15] ಗೋವಿಂದಪೈ,1946, ಹೆಬ್ಬೆರಳು, ಮಂಗಳೂರು,ಪು 34

Cover Page

INTERNATIONAL JOURNAL OF MULTIDISCIPLINARY EDUCATIONAL RESEARCH
ISSN:2277-7881(Print); IMPACT FACTOR :10.16(2026); IC VALUE:5.16; ISI VALUE:2.286
PEER REVIEWED AND REFEREED INTERNATIONAL JOURNAL
(Fulfilled Suggests Parameters of UGC by IJMER)
Volume:15, Issue:2(6), February 2026
Scopus Review ID: A2B96D3ACF3FEA2A
Article Received: Reviewed: Accepted
Publisher: Sucharitha Publication, India
Online Copy of Article Publication Available: www.ijmer.in

ಸರ್ವಸ್ವವೂ ಆಗಿರುತ್ತಾನೆ. ಆದ್ದರಿಂದ ಮಾತೃ ವಾತ್ಸಲ್ಯದ ಶಕ್ತಿಯೇ ಮಗನ ಬೆರಳಿಗೆ ಬದಲಾಗಿ ಅದಕ್ಕೆ ಕಾರಣವಾದ ಕೊರಳನ್ನು ಕೇಳುತ್ತದೆ. ತಾಯಿಯ ಶೋಕ ಮತ್ತು ಶಾಪದೊಂದಿಗೆ ನಾಟಕ ಮುಕ್ತಾಯವಾಗುತ್ತದೆ.

'ಏಕಲವ್ಯ' ನಾಟಕದಲ್ಲಿ ಏಕಲವ್ಯನು ಬಲಗೈ ಹೆಬ್ಬೆರಳನ್ನು ಗುರುದಕ್ಷಿಣೆಯಾಗಿ ನೀಡಿದ ನಂತರ ಎಡಗೈಯಿಂದ ಬಾಣ ಪ್ರಯೋಗಮಾಡುವುದನ್ನು ಕಲಿತು ಬಿಲ್ವಿದ್ಯೆಯಲ್ಲಿ ಪ್ರವೀಣನಾಗುತ್ತಾನೆ. ಮುಂದೆ ಬರಲಿರುವ ಮಹಾಭಾರತದ ಯುದ್ಧದಲ್ಲಿ ಏಕಲವ್ಯನನ್ನು ತಮ್ಮ ಕಡೆಗೆ ಸೆಳೆಯಬೇಕೆಂದು ಕೌರವ ಮತ್ತು ಪಾಂಡವ ಪಡೆಗಳೆರಡು ಪ್ರಯತ್ನಿಸುತ್ತವೆ.

**ಅರ್ಜುನ:**"ಈಗಿನ ಕುರುಕ್ಷೇತ್ರ ಯುದ್ಧದಲ್ಲಿ ನೀನು ನಮ್ಮ ಪಕ್ಷ ವಹಿಸಬೇಕೆಂದು ಕೇಳಿಕೊಳ್ಳಲು ಬಂದಿದ್ದೇನೆ.

**ಏಕಲವ್ಯ:** ಒಬ್ಬ ಯಃಕಶ್ಚಿತ್ ಬೇಡನನ್ನು ಬೇಡಲು ನಿಮ್ಮ ಶಾಸ್ತ್ರದಲ್ಲಿ ಸಮ್ಮತವಿದೆಯೇ ಗಾಂಡಿವಿ"[16]

ಈ ಹಿಂದೆ ವಿದ್ಯೆ ಕಲಿಯಲು ಹೋದಾಗ ಏಕಲವ್ಯನನ್ನು ಹೀಯಾಳಿಸಿ ಅವಮಾನಿಸಿ ಅಗೌರವದಿಂದ ನಡೆದುಕೊಂಡದ್ದರ ಪ್ರತೀಕಾರವಾಗಿ ನುಡಿದಂತಿವೆ ಈ ಮಾತುಗಳು. ಪರಿಶ್ರಮದಿಂದ ಕಲಿತ ವಿದ್ಯೆಯಿಂದ ಆತ್ಮವಿಶ್ವಾಸವೂ ಹೆಚ್ಚಿದೆ. ಮಹಾಭಾರತದ ಯುದ್ಧದಲ್ಲಿ ಏಕಲವ್ಯನು ಗೆಲುವಿನ ನಿರ್ಣಾಯಕ ವ್ಯಕ್ತಿಯಂತೆ ಕೌರವ, ಪಾಂಡವರ ಪಡೆಗಳಲ್ಲಿ ಚರ್ಚೆಯಾಗುತ್ತಿದೆ. ವಿದ್ಯೆಯೇ ಸಮಾಜದಲ್ಲಿನ ಶೋಷಣೆಯನ್ನು ಮೆಟ್ಟಿ ನಿಲ್ಲುವ ಪ್ರಭಲ ಅಸ್ತ್ರ ಎಂಬ ಅಂಬೇಡ್ಕರ್ ರವರ ತತ್ತ್ವ ಇಲ್ಲಿ ಧ್ವನಿತವಾಗಿದೆ.

ಏಕಲವ್ಯ ಯುದ್ಧದಲ್ಲಿ ಯಾವ ಪಡೆಯನ್ನು ಸೇರದಿರುವುದರಿಂದ ಪಾಂಡವರಿಗೆ ಲಾಭವಾಗುತ್ತದೆಂದು ಕರ್ಣ ವಿವರಿಸಿ, ನಾನು ನೀನು ಸಮಾನರು ಎಂದಾಗ ನಾವಿಬ್ಬರು ಸಮಾನರಲ್ಲ, ನೀನೀಗ ಅಂಗರಾಜ, ಸೂತಪುತ್ರನಲ್ಲ. ನಿನ್ನ ಜನರೆಲ್ಲರೂ ನಿನ್ನಷ್ಟೇ ಸರಿ ಸಮಾನವಾದ ಸ್ಥಾನಮಾನಗಳನ್ನು ಪಡೆದಿಲ್ಲ ಎನ್ನುತ್ತಾನೆ.

**ದುರ್ಯೋಧನ:**"ಕುಲಮದವನ್ನು ಅಳಿಸಿಹಾಕುವುದೇ ನಿನ್ನ ಗುರಿಯಾದರೆ ನಮ್ಮನ್ನು ಬೆಂಬಿಲಿಸು

**ಏಕಲವ್ಯ:** ಸಾಧ್ಯವಿಲ್ಲ ನಿನಗೆ ಅರ್ಜುನನ ಕುಲಮದ ಮಾತ್ರ ಅಳಿಯಬೇಕು
ಇದರಿಂದ ಈ ಲೋಕದ ಮೇಲು ಕೀಲು ನಾಶವಾಗುವುದಿಲ್ಲ, ನಿನಗೆ
ಸ್ವಾರ್ಥವೇ ಮುಖ್ಯ ಕುಲ ಪ್ರತಿಷ್ಠೆಯ ನಾಶವಲ್ಲ ಕುರು
ಪಾಂಡವರಲ್ಲಿ ಒಂದು ಪಕ್ಷ ವಹಿಸಿ ಯಾರೊಬ್ಬರ ದಾಳ ನಾನಾಗಲಾರೆ
ಎಲ್ಲೆಲ್ಲೂ ಇರುವ ಅನ್ಯಾಯದ ವಿರುದ್ಧ ಜ್ಞಾನದ ಗುತ್ತಿಗೆಯನ್ನು
ಎತ್ತಿಹಿಡಿಯುವ ಶಾಸ್ತ್ರಗಳ ವಿರುದ್ಧ ನನ್ನ ಯುದ್ಧ, ಮೇಲು ಕೀಳೆಂಬ
ವಂಚನೆಯನ್ನು ಅಳಿಸಲು ನನ್ನ ಸಮರ. ಕುರುಕ್ಷೇತ್ರ ಕೇವಲ ಉಳ್ಳವರ
ನಡುವಿನ ಕಚ್ಚಾಟ, ನನ್ನದು ಇಲ್ಲದವರ ಪರವಾದ ಹೋರಾಟ, ಈ
ಸಂಘರ್ಷ ಕುರು ಪಾಂಡವರಿಬ್ಬರ ವಿರುದ್ಧವೂ ಸಾಗಬೇಕು, ಆಗ ಮಾತ್ರ

[16] ಸಿದ್ಧಲಿಂಗಯ್ಯ, 2020, ಏಕಲವ್ಯ, ಅಂಕಿತ ಪುಸ್ತಕ ಪ್ರಕಾಶನ,ಬೆಂಗಳೂರು, ಪು 58

Cover Page

INTERNATIONAL JOURNAL OF MULTIDISCIPLINARY EDUCATIONAL RESEARCH
ISSN:2277-7881(Print); IMPACT FACTOR :10.16(2026); IC VALUE:5.16; ISI VALUE:2.286
PEER REVIEWED AND REFEREED INTERNATIONAL JOURNAL
(Fulfilled Suggests Parameters of UGC by IJMER)
Volume:15, Issue:2(6), February 2026
Scopus Review ID: A2B96D3ACF3FEA2A
Article Received: Reviewed: Accepted
Publisher: Sucharitha Publication, India
Online Copy of Article Publication Available: www.ijmer.in

ತುಳಿತಕ್ಕೆ ಸಿಕ್ಕಿದವರ ಬಾಳಿನಲ್ಲಿ ಬೆಳಕು ಮೂಡುತ್ತದೆ. ಕಡೆಗೆಣಿಸಲ್ಪಟ್ಟವರ ಬದುಕಿನ ತೋಟದಲ್ಲಿ ಸಮಾನತೆಯ ಹೂ ಅರಳುತ್ತದೆ."[17] ಎಂದು ತನ್ನ ಅಂತಿಮ ನಿರ್ಧಾರವನ್ನು ಸಾರುತ್ತಾನೆ. ಇದೇ ಈ ನಾಟಕದ ಕೇಂದ್ರ ಬಿಂದುವಾಗುತ್ತದೆ.

ಒಟ್ಟಾರೆಯಾಗಿ ಮೂರು ನಾಟಕಗಳು ವ್ಯವಸ್ಥೆಯ ಅಸಮಾನತೆಯ ವಿರುದ್ಧ ಧ್ವನಿ ಎತ್ತುತ್ತವೆ. ಹೆಬ್ಬೆರಳು ನಾಟಕದಲ್ಲಿ ಆರ್ಯ ಮತ್ತು ಅನಾರ್ಯ ಸಂಸ್ಕೃತಿಗಳ ನಡುವಿನ ಸಂಘರ್ಷವಾದರೆ, ಬೆರಳ್ ಗೆ ಕೊರಳ್ ನಾಟಕದಲ್ಲಿ ಶಿಷ್ಟ ಮತ್ತು ದೇಶಿ ಸಂಸ್ಕೃತಿಗಳ ನಡುವಿನ ಸಂಘರ್ಷವಾಗುತ್ತದೆ. ಏಕಲವ್ಯ ನಾಟಕದಲ್ಲಿ ಕುಲ ಮದಾಂಧತೆಯ ವಿರುದ್ಧ ಸಂಘರ್ಷವಾಗಿ ಕಂಡುಬರುತ್ತದೆ.

## ಪರಾಮರ್ಶನ ಗ್ರಂಥಗಳು

1. ಗೋವಿಂದಪೈ,1946, ಹೆಬ್ಬೆರಳು, ಮಂಗಳೂರು.

2. ಕುವೆಂಪು, 2023, ಬೆರಳ್ ಗೆ ಕೊರಳ್, ಉದಯರವಿ ಪ್ರಕಾಶನ, ಮೈಸೂರು.

3. ಸಿದ್ಧಲಿಂಗಯ್ಯ, 2020, ಏಕಲವ್ಯ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು,

4. ಅರವಿಂದ ಮಾಲಗತ್ತಿ (ಸಂ) 2006, ಕುವೆಂಪು ಕೃತಿ ವಿಮರ್ಶೆ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು.

5. ಡಾ. ಮರುಳ ಸದ್ಧಪ್ಪ ಕೆ. 2018, ಆಧುನಿಕ ಕನ್ನಡ ನಾಟಕ, ಸಪ್ನ ಬುಕ್ ಹೌಸ್, ಬೆಂಗಳೂರು.

6. ದೇಜಗೌ, 2010, ಮಹಾಕವಿ ಕುವೆಂಪು ದರ್ಶನ, ಪ್ರಸಾರಂಗ, ಮೈಸೂರು ವಿಶ್ವವಿದ್ಯಾಲಯ.

7. ಬಾಲಸುಬ್ರಹ್ಮಣ್ಯ ನರಹಳ್ಳಿ, 2002, ಕುವೆಂಪು ನಾಟಕಗಳ ಅಧ್ಯಯನ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು.

[17] ಸಿದ್ಧಲಿಂಗಯ್ಯ, 2020, ಏಕಲವ್ಯ, ಅಂಕಿತ ಪುಸ್ತಕ ಪ್ರಕಾಶನ,ಬೆಂಗಳೂರು, ಪು 60